**<u>2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.</u>**

**ದಿಃ 25.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ.ಪಿ ಎಸ್ ಎನ್ ವಕೀಲರಿಂದಃ**

ನನ್ನ ಚಾಲನಾ ಪರವಾನಿಗೆ ಪತ್ರ ಇರುತ್ತದೆ. ಆದರೆ ಅದನ್ನು ಹಾಜರಪಡಿಸಿರುತ್ತೇನೆ ಅಥವಾ ಇಲ್ಲವೋ ಎಂದು ನನಗೆ ನೆನಪಿರುವುದಿಲ್ಲ. ನಾನು ಯಾವ ಇಸ್ವಿಯಲ್ಲಿ ನನ್ನ ಚಾಲನಾ ಪರವಾನಿಗೆ ಪತ್ರ ಪಡೆದುಕೊಂಡಿರುತ್ತೇನೆಂದು ನನಗೆ ನೆನಪಿಲ್ಲ. ನಾನು ಯಾವ ಕಾಲಕ್ಕೂ ಚಾಲನಾ ಪರವಾನಿಗೆ ಪತ್ರ ಹೊಂದಿಲ್ಲ ಹಾಗೂ ನನಗೆ ವಾಹನ ಚಾಲನೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯನ್ನು ನಾನು ಯಾರ ಯಾರ ವಿರುದ್ಧ ಸಲ್ಲಿಸಿರುತ್ತೇನೆಂದು ನನಗೆ ಹೇಳಲು ಬರುವುದಿಲ್ಲ. ಎದುರುದಾರ ನಂ.3 ವಾಹನದ ಮಾಲೀಕರಲ್ಲ ಹಾಗೂ ಚಾಲಕ ಸಹ ಅಲ್ಲ ಹಾಗೂ ಪ್ರಸ್ತುತ ಪ್ರಕರಣಕ್ಕೂ ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸದರಿಯವರು ವಾಹನದ ಮಾಲೀಕರಲ್ಲ ಆದರೆ ವಾಹನ ಚಾಲನೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ವಾಹನ ಸಂ.ಕೆಎ-63/ಇ-7304 ಮತ್ತು ಕೆಎ-30/1869 ರ ಮಾಲೀಕರನ್ನು ಹಾಗೂ ವಿಮಾ ಕಂಪನಿಯವರನ್ನು ಈ ಪ್ರಕರಣದಲ್ಲಿ ನೀವು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ವಕೀಲರಿಗೆ ವಾಹನದ ಮಾಲೀಕರು ಯಾರು ಎಂದು ಹಾಗೂ ಅವರ ಆರ್ ಸಿ ವಿವರಗಳನ್ನು ನೀಡಿರುತ್ತೇನೆ. ವಾಹನ ಸಂ.ಕೆಎ-63/ಇ-7304 ರ ಮಾಲೀಕರು ಎದುರುದಾರ ನಂ.1 ಎಂದರೆ ಸರಿ.

2. ನಾನು 10 ಲಕ್ಷದವರೆಗೆ ಔಷದೋಪಚಾರಕ್ಕಾಗಿ ಖರ್ಚು ಮಾಡಿರುತ್ತೇನೆಂದು ಹೇಳಿದ್ದು ಆ ಬಗ್ಗೆ ದಾಖಲೆ ಹಾಜರಪಡಿಸಿರುತ್ತೇನೆ. ನನ್ನ ವಾರ್ಷಿಕ ಆದಾಯ ಕಡಿಮೆ ಇದೆ ಹಾಗೂ ನನಗೆ ಔಷದೋಪಚಾರಕ್ಕಾಗಿ ನಾನು ಹೇಳುತ್ತಿರುವ ಹಾಗೆ ಮೊತ್ತ ಖರ್ಚು ಆಗಿಲ್ಲ ಹಾಗಾಗಿ ನನಗೆ ಒಂದು

ಕೋಟಿ ರೂ. ಪರಿಹಾರವನ್ನು ಕೇಳಲು ಬರುವುದಿಲ್ಲ ಎಂದರೆ ಸರಿ. ನಾನು ಆಚಾರ್ಯ ಕೆಲಸ ಮಾಡಿ ಬಹಳಷ್ಟು ಮೊತ್ತ ಗಳಿಸುತ್ತೇನೆಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ. ನೀವು ಆಚಾರ್ಯ ಎಂದು ಕೆಲಸ ಮಾಡುತ್ತಿದ್ದಿರಿ ಎಂಬುದರ ಬಗ್ಗೆ ಯಾವುದಾದರೂ ದಾಖಲೆ ಹಾಜರಪಡಿಸಿರುತ್ತೀರಾ ಎಂದರೆ ಸಾಕ್ಷಿ ನಾನು ಆಚಾರ್ಯ ವಿದ್ಯೆ ಕಲಿತ ಬಗ್ಗೆ ದಾಖಲೆಗಳು ಇವೆ ಆದರೆ ಕೆಲಸ ಮಾಡುತ್ತಿರುವ ಬಗ್ಗೆ ಇಲ್ಲ ಎಂದು ನುಡಿಯುತ್ತಾರೆ. ನಾನು ಅರ್ಜಿಯಲ್ಲಿ ಮುಂಬೈನಲ್ಲಿ ಮುಲಂದಾ ವಿದ್ಯಾಪೀಠ ಹಾಗೂ ಪೂರ್ಣಪ್ರಜ್ಞಾ ವಿದ್ಯಾಪೀಠ ಬೆಂಗಳೂರಿನಲ್ಲಿ 4 ರಿಂದ 8 ವರ್ಷಗಳವರೆಗೆ ತರಬೇತಿ ಪಡೆದಿರುತ್ತೇನೆಂದು ಹೇಳಿದ್ದು ಆ ಬಗ್ಗೆ ದಾಖಲೆಗಳು ನನ್ನ ಹತ್ತಿರ ಇವೆ ಆದರೆ ಹಾಜರಪಡಿಸಿಲ್ಲ. ನಾನು ಪೂಜಾ ಪುನಸ್ಕಾರ ಮಾಡುವುದರಲ್ಲಿ ಪರಿಣಿತಿ ಹೊಂದಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಹಾಗೂ ನಾನು ಆಚಾರ್ಯ ವೃತ್ತಿಯನ್ನು ಮಾಡುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವನಿಗೆ ಪತ್ರ ಇಲ್ಲದ ಕಾರಣ ನನಗೆ ವಾಹನ ಚಾಲನೆ ಮಾಡಲು ಬರುವುದಿಲ್ಲ ಹಾಗಾಗಿ ನಾನೇ ಅಪಘಾತ ಮಾಡಿ ಬಿದ್ದು ಗಾಯಪಡಿಸಿಕೊಂಡಿದ್ದರೂ ಸಹ ಹಾಗೂ ಎದುರುದಾರ ನಂ.3 ಇವರು ಅಪಘಾತದಲ್ಲಿ ಯಾವುದೇ ರೀತಿ ಭಾಗೀಯಾಗಿಲ್ಲದಿದ್ದರೂ ಸಹ ಎದುರುದಾರ ನಂ.1 ಇವರ ವಾಹನದ ಮೇಲೆ ಸುಳ್ಳು ಪಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಎದುರುದಾರ ನಂ.1 ಗೈರುಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**